**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ.1128–14**

| | | |
|---|---|---|
| ಹೆಸರು | ಕೆಂಪಮ್ಮ | ಪ್ರಾ.ಸಾ.1 |
| ಗಂಡನ ಹೆಸರು | ಕಾಳೇಗೌಡ | ಚಾ.ಸಾ.1 |
| ವಯಸ್ಸು | 45ವರ್ಷ | |
| ಕೆಲಸ | ಗೃಹಿಣಿ | ಸಾ.ಪ್ರ.ವ.ಬೋ |
| ಹಾಲಿ ವಾಸ | ಕನಕನಗರ | ದಿ:–11–7–2018 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :–**

ದಿ: 19.03.2014 ರಂದು ನಾನು ತರಕಾರಿ ತರಲು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಹೋಗುತ್ತಿದ್ದಾಗ ವಾಟರ್ ಟ್ಯಾಂಕ ರಸ್ತೆಯ ಸೀತಾರಾಮ ಎಂಬುವವರ ಮನೆಯ ಪಕ್ಕದಲ್ಲಿ ಇಬ್ಬರು ವ್ಯಕ್ತಿಗಳು ದ್ವಿಚಕ್ರ ವಾಹನದಲ್ಲಿ ಬಂದು ನನ್ನ ಕತ್ತಿನಲ್ಲಿದ್ದ ಸುಮಾರು ರೂ. 2,30,000/–ಚಿನ್ನದ ಮಾಂಗಲ್ಯದ ಸರವನ್ನು ಕಿತ್ತುಕೊಂಡು ಹೋಗಿರುತ್ತಾರೆ. ಚೈನಿನಲ್ಲಿ ಒಂದು ತಾಳಿ, 4 ಗುಂಡು, 2 ಲಕ್ಷ್ಮಿ ಕಾಸು ಇದ್ದವು. ಆ ದನಂತರ ನಾನು ಪೊ.ಠಾಣೆಗೆ ಹೋಗಿ ದೂರನ್ನು ನೀಡಿದೆನು.ದೂರನ್ನು ನೋಡಿ ಗುರುತಿಸಿರುತ್ತೇನೆ. ದೂರನ್ನು ನಿಪಿ 1 ಎಂದು, ಸಾಕ್ಷಿ ಸಹಿಯನ್ನು 1(ಎ) ಎಂದು ನಿಶಾನಿಸಿಕೊಳ್ಳಲಾಯಿತು. ಆ ದಿನ ನನ್ನ ಮಾಂಗಲ್ಯದ ಸರ ಕಿತ್ತುಕೊಂಡು ಹೋಗಿದ್ದ , ಆರೋಪಿಗಳು ಈಗ ನ್ಯಾಯಾಲಯದ ಮುಂದಿದ್ದು, ನೋಡಿ ಗುರುತಿಸುತ್ತೇನೆ. ಆ ದಿನ ಆರೋಪಿಗಳು ನನ್ನಿಂದ ಕಿತ್ತುಕೊಂಡಿದ್ದ ಮಾಂಗಲ್ಯದ ಸರವನ್ನು ನಾನು ಮಧ್ಯಂತರ ವಶಕ್ಕೆ ಪಡೆದುಕೊಂಡಿದ್ದು, ಅದನ್ನು ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಸದರಿ ಮಾಂಗಲ್ಯದ ಸರದಲ್ಲಿದ್ದ, ಮಾಂಗಲ್ಯ , ಲಕ್ಷ್ಮಿ ಕಾಸುಗಳು, ಮತ್ತು ಗುಂಡುಗಳು ಇರುವುದಿಲ್ಲ. ಸರವನ್ನು ಮಾತ್ರ ಸಿಕ್ಕಿರುತ್ತದೆ. ದೂರನ್ನು ಪರಿಶೀಲನೆ ಮಾಡಿ, ಅದೇ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರು ಕ್ರಮ ಜರುಗಿಸಿರುತ್ತಾರೆ. ಮಹಜರನ್ನು ನಿಪಿ. 2 ಎಂದು ಸಾಕ್ಷಿ ಸಹಿಯನ್ನು 1(ಎ) ಮತ್ತು 2 (ಎ) ಎಂದು ನಿಶಾನಿಸಿಕೊಳ್ಳಲಾಗಿದೆ. ನಂತರ ನಾನು ಪೊಲೀಸರಿಗೆ ಹೋಗಿ ಮರು ಹೇಳಿಕೆ ನೀಡಿರುತ್ತೇನೆ.

ಆರೋಪಿಗಳ ಪರ ವಕೀಲರು ಗೈರ ಹಾಜರಾಗಿದ್ದು ಪಾಟೀ ಸವಾಲು: ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**